**1 ನೇ ಹೆಚ್ಚುವರಿ ಜಿಲ್ಲಾ ಮತ್ತು ವಿಶೇಷ ಸತ್ರ ನ್ಯಾಯಾಲಯ,**
**ಚಿಕ್ಕಮಗಳೂರು**

**ಸ್ಪೆಷಲ್.ಸಿ.ನಂಃ 123/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಆರ್ ಎಸ್. ಜಹಾಗೀರದಾರ | ಪಿಡಬ್ಲೂ | - 09 |
| ತಂದೆಯ ಹೆಸರು | - ಶೇಷಗಿರಿರಾವ್ | ಸಿಡಬ್ಲೂ | - 15 |
| ವಯಸ್ಸು | - 52 ವರ್ಷ | | |
| ಉದ್ಯೋಗ | - ಪೊಲೀಸ್ ಉಪಾಧೀಕ್ಷಕರು, ಸಿಐಡಿ, ಬೆಂಗಳೂರು | | |
| ವಾಸ ಸ್ಥಳ | - ಬೆಂಗಳೂರು | | |

**(**ಸಾಕ್ಷಿಯು ಈ ದಿನ ***Google meet*** ನಲ್ಲಿ ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹೇಳಿಕೆಯನ್ನು ನೀಡಲು ಹಾಜರಾಗಿರುತ್ತಾರೆ. ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಸಾಕ್ಷ್ಯವನ್ನು ದಾಖಲಿಸುವ ಮೊದಲು, ಧ್ವನಿಯು ಸ್ಪಷ್ಟವಾಗಿ ಕೇಳಿಸುತ್ತಿದೆ ಎಂಬುದನ್ನು ಹಾಗೂ ಸಾಕ್ಷ್ಯ ದಾಖಲೀಕರಣದಲ್ಲಿ ಯಾವುದೇ ತಾಂತ್ರಿಕ ದೋಷವಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲಾಗಿದೆ**).**

ದಿನಾಂಕಃ 10-08-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ದಿಃ 04-11-2017 ರಿಂದ 12-03-2020 ರವರೆಗೆ ನಾನು ಕೊಪ್ಪ ಉಪ ವಿಭಾಗದ ಡಿ.ವೈ.ಎಸ್.ಪಿ. ಆಗಿ ಕಾರ್ಯ ನಿರ್ವಹಿಸುತ್ತಿದ್ದೆ.

2. ದಿಃ 18-06-2019 ರಂದು ಚಿಕ್ಕಮಗಳೂರಿನ ಎಸ್.ಪಿ.ರವರ ಆದೇಶದ ಮೇರೆಗೆ ಈ ಪ್ರಕರಣದ ಮುಂದಿನ ತನಿಖೆಯನ್ನು

ಚಾಸಾ.14 ರವರಿಂದ ವಹಿಸಿಕೊಂಡಿರುತ್ತೇನೆ. ಸದರಿ ಆದೇಶವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.11 ಎಂದು ಗುರುತಿಸಲಾಯಿತು.

3. ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ.8 ಮತ್ತು 9 ರವರಿಗೆ ನಿಪಿ.6 ರಂತೆ ನೋಟೀಸ್ ನೀಡಿ ಅವರ ಸಮಕ್ಷಮ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ನಿಪಿ.2 ರಂತೆ ಪಂಚನಾಮೆಯನ್ನು ಜರುಗಿಸಿ ಖಾಕಿ ಶರ್ಟನ್ನು ಜಪ್ತು ಮಾಡಿಕೊಂಡಿರುತ್ತೇನೆ. ನಿಪಿ.2 ಮತ್ತು ಪಿ.6 ಅದರಲ್ಲಿರುವ ನನ್ನ ಸಹಿಯನ್ನು ನಿಪಿ.2(ಡಿ) ಮತ್ತು ಪಿ.6(ಸಿ) ಎಂದು ಗುರುತಿಸಲಾಯಿತು.

4. ಆ ಸಂದರ್ಭದಲ್ಲಿ ತೆಗೆಯಲಾದ ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.3 ಮತ್ತು ಪಿ.4 ಎಂದು ಗುರುತಿಸಲಾಗಿದೆ. ಸದರಿ ಶರ್ಟನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ. ಮುದ್ದೆಮಾಲನ್ನು ಮಾಲುಪಟ್ಟಿಗೆ ಅಳವಡಿಸಿ ಕೊಂಡಿರುತ್ತೇನೆ. ಸದರಿ ದಾಖಲೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.12 ಎಂದು ಗುರುತಿಸಲಾಯಿತು.

5. ಚಾಸಾ.1 ರವರ ಮರು ಹೇಳಿಕೆಯನ್ನು ಮತ್ತು ಚಾಸಾ.2 ರಿಂದ ಚಾಸಾ.4 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಚಾಸಾ.13 ರವರಿಂದ ಅವರ ವಿಡಿಯೋ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

6. ಚಾಸಾ.13 ರವರು ಕಲಂ 65(ಬಿ) ರಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಿರುತ್ತಾರೆ. ಸದರಿ ದೃಢೀಕರಣ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.13 ಎಂದು ಗುರುತಿಸಲಾಯಿತು. ಹೇಳಿಕೆಗಳ ಡಿವಿಡಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.14 ಎಂದು ಗುರುತಿಸಲಾಯಿತು.

7. ದಿಃ 19-06-2019 ರಂದು ವಲಯ ಅರಣ್ಯಾಧಿಕಾರಿಯವರಿಗೆ ಫಿರ್ಯಾದಿಯ ಹಾಜರಾತಿ ಪುಸ್ತಕ, ಸೇವಾ ವಿವರ, ಕೃತ್ಯ ನಡೆದ ಸ್ಥಳದ ದಾಖಲಾತಿಗಳನ್ನು ನೀಡುವಂತೆ ಪತ್ರ ಬರೆದಿರುತ್ತೇನೆ ಮತ್ತು ದಿಃ 30-07-2019 ರಂದು ಆ ಕುರಿತು ಮಾಹಿತಿ ಮತ್ತು ದಾಖಲಾತಿಗಳನ್ನು ಪಡೆದಿರುತ್ತೇನೆ. ಸದರಿಯವರಿಂದ ಪಡೆದುಕೊಂಡ ಮಾಹಿತಿಯನ್ನು ನಿಪಿ.15 ಎಂದು ಗುರುತಿಸಲಾಯಿತು.

8. ಅದೇ ದಿನ ನೊಂದವರ ಮತ್ತು ಆರೋಪಿತನ ಜಾತಿ ದೃಢೀಕರಣ ಪತ್ರ ನೀಡುವಂತೆ ತಹಸೀಲ್ದಾರರವರಿಗೆ ಪತ್ರ ಬರೆದಿರುತ್ತೇನೆ. ಅವರು ನೀಡಿದ ಜಾತಿ ಪ್ರಮಾಣಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ.5 ಎಂದು ಗುರುತಿಸಲಾಗಿರುತ್ತದೆ.

9. ದಿಃ 20-06-2019 ರಂದು ಚಾಸಾ.1 ರವರ ಗಾಯದ ಪ್ರಮಾಣಪತ್ರವನ್ನು ಒದಗಿಸುವಂತೆ ವೈದ್ಯರಿಗೆ ಪತ್ರ ಬರೆದಿದ್ದು, ಅವರು ನೀಡಿದ ಗಾಯದ ಪ್ರಮಾಣಪತ್ರವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.7 ಎಂದು

ಗುರುತಿಸಲಾಗಿರುತ್ತದೆ.

10. ಕೃತ್ಯ ನಡೆದ ನಕ್ಷೆಯನ್ನು ನೀಡುವಂತೆ ಪತ್ರ ಬರೆದಿರುತ್ತೇನೆ. ಅವರು ನೀಡಿದ ನಕ್ಷೆಯನ್ನು ಪಡೆದಿದ್ದು, ಅದನ್ನು ಈಗಾಗಲೇ ನಿಪಿ.8 ಎಂದು ಗುರುತಿಸಲಾಗಿದೆ.

11. ದಿಃ 26-06-2019 ರಂದು ಚಾಸಾ.5 ರಿಂದ 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

12. ದಿಃ 19-07-2019 ರಂದು ಆರೋಪಿತನು ನ್ಯಾಯಾಲಯದಿಂದ ಜಾಮೀನು ಪಡೆದು ನನ್ನ ಮುಂದೆ ಹಾಜರಾಗಿದ್ದು ಆತನನ್ನು ವಿಚಾರಣೆ ಮಾಡಿ ಬಿಡುಗಡೆ ಮಾಡಿರುತ್ತೇನೆ. ಸದರಿ ಆರೋಪಿತನು ಈಗ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ.

13. ತನಿಖೆ ಪೂರ್ಣಗೊಂಡಿದ್ದರಿಂದ ಜಿಲ್ಲಾ ವರಿಷ್ಟಾಧಿಕಾರಿಯವರ ಆದೇಶದ ಮೇರೆಗೆ ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತನ ಪರವಾಗಿ ಶ್ರೀ ಹೆಚ್.ಎ.ಟಿ. ವಕೀಲರಿಂದಃ-</u>

14. ಘಟನಾ ಸ್ಥಳದಲ್ಲಿ ಗಲಾಟೆಯಾದ ಬಗ್ಗೆ ಯಾವುದೇ ಸ್ಪಷ್ಟವಾದ ಕುರುಹುಗಳು ಇರಲಿಲ್ಲ. ಜೆಸಿಬಿಯಿಂದ ಜಮೀನು ಸಮತಟ್ಟಾದ ಬಗ್ಗೆ ಮಹಜರಿನಲ್ಲಿ ಬರೆಯಲಾಗಿದೆಯೇ ಎಂದರೆ ನನಗೆ ನೆನಪಿಲ್ಲ. ಜೆಸಿಬಿಯ ಚಾಲಕನನ್ನು ಘಟನೆ ನೋಡಿದ ಬಗ್ಗೆ

ವಿಚಾರಿಸಿರಿತ್ತೇನೆಯೋ ಎಂದರೆ ಆರೋಪಿ ತನ್ನನ್ನು ಕಳುಹಿಸಿರುತ್ತಾನೆ ಎಂದು ಹೇಳಿರುತ್ತಾನೆ. ಜೆಸಿಬಿಯಿಂದ ಕೆಲಸ ಆಗುತ್ತಿರುವ ಸಂದರ್ಭದಲ್ಲಿ ಆರೋಪಿ ಮತ್ತು ಚಾಸಾ.1 ರವರ ನಡುವೆ ಯಾವುದೇ ಘರ್ಷಣೆಯಾದ ಬಗ್ಗೆ ತನಿಖೆಯಲ್ಲಿ ಕಂಡುಬಂದಿತ್ತೋ ಎಂದರೆ ಜೆಸಿಬಿ ಕೆಲಸ ನಿಂತ ನಂತರ ಘರ್ಷಣೆಯಾಗಿದೆ. ಜೆಸಿಬಿ ಕೆಲಸ ನಿಂತು ಜೆಸಿಬಿಯ ಚಾಲಕ ಹೋದ ನಂತರ ಆರೋಪಿ ಮತ್ತು ತನ್ನ ನಡುವೆ ಘರ್ಷಣೆಯಾದ ಬಗ್ಗೆ ಚಾಸಾ.1 ರವರು ತನ್ನ ಹೇಳಿಕೆಯಲ್ಲಿ ಹೇಳಿರುತ್ತಾರೆ. ಆ ರೀತಿ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

15. ಚಾಸಾ.1 ರವರು ತನ್ನ ಶರ್ಟಿನ ಗುಂಡಿ ಬಿದ್ದ ಬಗ್ಗೆ ಹೇಳಿದ್ದು ಅಲ್ಲಿ ಹುಡುಕಿದರು ಸಿಕ್ಕಿರುವುದಿಲ್ಲ. ಆತನ ಶರ್ಟಿನ ಇಲಾಖಾ ಚಿಹ್ನೆಗಳು ಅಲ್ಲಿ ಬಿದ್ದಿರುವುದಿಲ್ಲ. ಚಾಸಾ.1 ರವರ ದೂರನ್ನು ಯಾರು ಬರೆದಿದ್ದು ಎಂದು ವಿಚಾರಿಸಿರುತ್ತಿರೋ ಎಂದರೆ ಆತನೇ ಲಿಖಿತವಾಗಿ ದೂರನ್ನು ನೀಡಿರುತ್ತಾನೆ.

16. ಘಟನಾ ಸ್ಥಳ ಅರಣ್ಯ ಇಲಾಖೆಗೆ ಸಂಬಂದಪಟ್ಟಿದ್ದು ಎಂದು ತೋರಿಸುವ ಸಲುವಾಗಿ ಸ್ಥಳ ನಕಾಶೆ, ಗ್ರಾಮ ನಕಾಶೆ, ಸಿ ನೋಟೀಫಿಕೇಷನ್, ಪಹಣಿ ಪತ್ರಿಕೆ ಮತ್ತು ಮ್ಯುಟೇಷನ್‌ನ್ನು ಹಾಜರುಪಡಿಸಿರುತ್ತೇನೆ. ಆ ರೀತಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

17. ಆರೋಪಿಗೆ ಸಂಬಂದಪಟ್ಟ ಜಮೀನು ಅರಣ್ಯ

ಇಲಾಖೆಯ ಜಮೀನಿಗೆ ಲಗತ್ತಾಗಿ ಇರುವ ಕುರಿತು ಯಾವುದೇ ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ.

18. ವೈದ್ಯಾಧಿಕಾರಿಯಿಂದ ಗಾಯದ ಪ್ರಮಾಣಪತ್ರವನ್ನು ಸಂಗ್ರಹಿಸಿರುತ್ತೇನೆ. ಯಾರು ಹಲ್ಲೆ ಮಾಡಿದ್ದರು ಎನ್ನುವ ಕುರಿತು ಗಾಯದ ಪ್ರಮಾಣಪತ್ರದಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. ತನ್ನ ಬಳಿ ಗಾಯಾಳು ಏನು ಹೇಳಿದ್ದ ಎನ್ನುವ ಕುರಿತು ತಿಳಿದುಕೊಳ್ಳಲು ವೈದ್ಯರನ್ನು ವಿಚಾರಿಸಲು ನನಗೇನು ತೊಂದರೆ ಇರಲಿಲ್ಲ.

19. ಅರಣ್ಯ ಪ್ರದೇಶದಲ್ಲಿ ಜೆಸಿಬಿಯಿಂದ ಕೆಲಸ ನಡೆಸಿದ್ದ ಕುರಿತು ಅರಣ್ಯಾಧಿಕಾರಿಗಳು ತೆಗೆದುಕೊಂಡ ಕ್ರಮದ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ಜೆಸಿಬಿಯ ಸಂಖ್ಯೆ ಮತ್ತು ಅದರ ಮಾಲೀಕತ್ವದ ಕುರಿತು ನಾನು ವಿಚಾರಣೆ ಮಾಡಿರುವುದಿಲ್ಲ.

20. ಚಾಸಾ.1 ರವರು ಆ ಸ್ಥಳದಲ್ಲಿ ಎಷ್ಟು ಸಮಯದಿಂದ ಕಾರ್ಯ ನಿರ್ವಹಿಸುತ್ತಿದ್ದರು ಎನ್ನುವ ಕುರಿತು ನಾನು ದಾಖಲಾತಿ ಪಡೆದುಕೊಂಡಿರುತ್ತೇನೆ. ಚಾಸಾ.1 ಘಟನಾ ಸ್ಥಳದ ಅಸುಪಾಸಿನವನಲ್ಲ ಮತ್ತು ಆತ ಬೇರೆ ತಾಲ್ಲೂಕಿನಿಂದ ಬಂದು ಅಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ದಾಖಲಾತಿ ನೋಡಬೇಕಾಗುತ್ತದೆ.

21. ನಿಪಿ.2 ರಲ್ಲಿ ಕಲಂ ನಂಬರು 3 ರಲ್ಲಿ the place of occurrence shown by ಎಂದು ಕಂಡುಬರುವಲ್ಲಿ ಇರುವ ಸಹಿ

ಯಾರದ್ದು ಎಂದರೆ ಅದು ಫಿರ್ಯಾದಿಯ ಸಹಿಯಂತೆ ಕಂಡುಬರುತ್ತದೆ ಆದರೆ ಸಾಮಾನ್ಯವಾಗಿ ನಾವು ಅಂತಹ ಸ್ಥಳದಲ್ಲಿ ಸಹಿ ಪಡೆದುಕೊಳ್ಳುವುದಿಲ್ಲ. ನಿಪಿ.2 ರ 3 ನೇ ಪುಟದಲ್ಲಿ ಕಬ್ಬಿಣದ ಗೇಟ್ ಇರುತ್ತದೆ ನಾವುಗಳು ಮಧ್ಯಾಹ್ನ 12 ಗಂಟೆಯಿಂದ 1 ಗಂಟೆ ಎಂಬುದನ್ನು ಬೇರೆ ಶಾಹಿಯಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ.

22. ದಿಃ 18-06-2019 ರಂದು ಚಿಕ್ಕಮಗಳೂರಿನ ಎಸ್.ಪಿ.ರವರ ಆದೇಶದ ಮೇರೆಗೆ ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ.14 ರವರಿಂದ ವಹಿಸಿಕೊಂಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

23. ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ.8 ಮತ್ತು 9 ರವರಿಗೆ ನಿಪಿ.6 ರಂತೆ ನೋಟೀಸ್ ನೀಡಿ ಅವರ ಸಮಕ್ಷಮ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ನಿಪಿ.2 ರಂತೆ ಪಂಚನಾಮೆಯನ್ನು ಜರುಗಿಸಿ ಖಾಕಿ ಶರ್ಟನ್ನು ಜಪ್ತು ಮಾಡಿಕೊಂಡಿರುತ್ತೇನೆ ಮತ್ತು ಆ ಸಂದರ್ಭದಲ್ಲಿ ತೆಗೆಯಲಾದ ನಿಪಿ.3 ಮತ್ತು ಪಿ.4 ಫೋಟೋಗಳನ್ನು ತೆಗೆಸಿರುತ್ತೇನೆ ಮತ್ತು ಮುದ್ದೆಮಾಲನ್ನು ಮಾಲುಪಟ್ಟಿಗೆ ಅಳವಡಿಸಿ ಕೊಂಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

24. ಚಾಸಾ.1 ರವರ ಮರು ಹೇಳಿಕೆಯನ್ನು ಮತ್ತು ಚಾಸಾ.2 ರಿಂದ ಚಾಸಾ.4 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಮತ್ತು ಚಾಸಾ.13 ರವರಿಂದ ಅವರ ವಿಡಿಯೋ ಹೇಳಿಕೆಗಳನ್ನು

ದಾಖಲಿಸಿಕೊಂಡಿರುತ್ತೇನೆ ಮತ್ತು ಚಾಸಾ.13 ರವರು ಕಲಂ 65(ಬಿ) ರಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

25. ದಿಃ 19-06-2019 ರಂದು ವಲಯ ಅರಣ್ಯಾಧಿಕಾರಿಯವರಿಗೆ ಫಿರ್ಯಾದಿಯ ಹಾಜರಾತಿ ಪುಸ್ತಕ, ಸೇವಾ ವಿವರ, ಕೃತ್ಯ ನಡೆದ ಸ್ಥಳದ ದಾಖಲಾತಿಗಳನ್ನು ನೀಡುವಂತೆ ಪತ್ರ ಬರೆದಿರುತ್ತೇನೆ ಮತ್ತು ದಿಃ 30-07-2019 ರಂದು ಆ ಕುರಿತು ಮಾಹಿತಿ ಮತ್ತು ದಾಖಲಾತಿಗಳನ್ನು ಪಡೆದಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

26. ಅದೇ ದಿನ ನೊಂದವರ ಮತ್ತು ಆರೋಪಿತನ ಜಾತಿ ದೃಢೀಕರಣ ಪತ್ರ ನೀಡುವಂತೆ ತಹಸೀಲ್ದಾರರವರಿಗೆ ಪತ್ರ ಬರೆದಿರುತ್ತೇನೆ ಮತ್ತು ಅವರು ನೀಡಿದ ಜಾತಿ ಪ್ರಮಾಣಪತ್ರವನ್ನು ನಿಪಿ.5 ರಂತೆ ಪಡೆದುಕೊಂಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

27. ದಿಃ 20-06-2019 ರಂದು ಚಾಸಾ.1 ರವರ ಗಾಯದ ಪ್ರಮಾಣಪತ್ರವನ್ನು ಒದಗಿಸುವಂತೆ ವೈದ್ಯರಿಗೆ ಪತ್ರ ಬರೆದಿದ್ದು, ಅವರು ನೀಡಿದ ಗಾಯದ ಪ್ರಮಾಣಪತ್ರವನ್ನು ನಿಪಿ.7 ರಂತೆ ಪಡೆದುಕೊಂಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

28. ಕೃತ್ಯ ನಡೆದ ನಕ್ಷೆಯನ್ನು ನೀಡುವಂತೆ ಪತ್ರ ಬರೆದಿರುತ್ತೇನೆ

ಮತ್ತು ಅವರು ನೀಡಿದ ನಕ್ಷೆಯನ್ನು ನಿಪಿ.8 ರಂತೆ ಪಡೆದುಕೊಂಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಿಃ 26-06-2019 ರಂದು ಚಾಸಾ.5 ರಿಂದ 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

29. ತನಿಖೆಯಲ್ಲಿ ಆರೋಪಿತನ ವಿರುದ್ಧ ಯಾವುದೇ ಆರೋಪ ಸಾಬೀತಾಗದಿದ್ದರೂ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲುಗಳಿಗೂ ಮತ್ತು ಆರೋಪಿತನಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಕಿರಣ್ ಕಿಣಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ